ಶ್ರೀ ಚೌದರೆಡ್ಡಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ 1993ನೇ, ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ

ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ,1993 ಪರಿಯಾಲೋಚನ ಪ್ರಸ್ತಾಪ

*ಶ್ರೀ ವೈ.ಕೆ.ರಾಮಯ್ಯ (ಕುಣಿಗಲ್) (ಮುಂದೆವರೆದ ಚರ್ಚೆ) : ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಸದನದ ಮುಂದೆ ಮಂಡಿಸಿರತಕ್ಕಂಥ ಪಂಚಾಯತ್ ರಾಜ್ ವಿಧೇಯಕವನ್ನು ನಾನು ಸ್ವಾಗತಿಸಿರುತ್ತೇನೆ.ಆದರೆ ಈ ಸ್ವಾಗತ ಷರತ್ತಿನಿಂದ ಕೂಡಿದಂತಹ ಸ್ವಾಗತ. ಅದಕ್ಕೆ ಕಾರಣವೇನೆಂದರೆ ಗ್ರಾಮಪಂಚಾಯತಿಗಳನ್ನು ಗ್ರಾಮಸ್ವರಾಜ್ಯವನ್ನಾಗಿ ಮಾಡುವಂತಹ ಒಂದು ವಿಧೇಯಕವನ್ನು ತಂದಿದ್ದಾರೆ ಅದ್ದರಿಂದ ನಾನು ಈ ವ್ಯವಸ್ಥೆಯನ್ನು ವಿರೋಧ ಮಾಡುವುದಕ್ಕೆ ಸಿದ್ದನಿಲ್ಲ. ಅದರೆ ಈ ವ್ಯವಸ್ಥೆಯನ್ನು ತರುವುದಕ್ಕೆ ರಚಿಸಿದಂತಹ ವಿಧೇಯಕದಲ್ಲಿ ಇರುವಂತಹ ಕೆಲವು ಅಸಂಗತ ವಿಷಯಗಳನ್ನು ತಪ್ಪುಗಳನ್ನು ಮತ್ತು ಯಾವ ಉದ್ದೇಶ ಇತ್ತು ಆ ಉದ್ದೇಶದ ವಿಫಲತೆ ಮಾಡುವಂತಹ ವಿಚಾರಗಳು ಏನಿದೆ ಅವುಗಳನ್ನು ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತರುವಂತಹ ಅಧಿಕಾರವನ್ನು ಉಳಿಸಿಕೊಂಡು ಷರತ್ತಿನ ಮೇಲೆ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಇಂತಹ ಒಂದು ಪ್ರಾಮುಖ್ಯವಾದ ವಿಧೇಯಕವನ್ನು ತರುವಾಗ ಬಹುಶಃಎಷ್ಟು ಎಚ್ಚರಿಕೆಯನ್ನು ವಹಿಸಬೇಕಾಗಿತ್ತೋ, ಎಷ್ಟು ಅಸಕ್ತಿಯನ್ನು ವಹಿಸಬೇಕಾಗಿತ್ತೋ, ಅಷ್ಟು ಎಚ್ಚರಿಕೆಯನ್ನು ಅಷ್ಟು ಅಸಕ್ತಿಯನ್ನು ಸರ್ಕಾರ ವಹಿಸಿಲ್ಲವೆಂದು ನನ್ನ ಭಾವನೆ. ನಾನು ನಿಮಗೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ನಮ್ಮಮಂತ್ರಿಗಳು ನಾವು ಹಿಂದೆ ತಂದಂತಹ ವಿಧೇಯಕದ ಅನುಭವದ ಆಧಾರದ ಮೇಲೆ ಹೊಸದಾದ ಒಂದುವಿಧೇಯಕವನ್ನು ತಂದಿದ್ದೇವೆ ಎನ್ನುವ ಮಾತನ್ನು ಹೇಳಿದರು. ಆ ಅನುಭವದ ಆಧಾರದ ಮೇಲೆ ವಿಧೇಯಕವನ್ನು ಸಿದ್ದ ಮಾಡುವಾಗ ಗ್ರಾಮಾಂತರ ಪ್ರದೇಶದ ಆಡಳಿದ ವ್ಯವಸ್ಥೆಯನ್ನು ನಿಮ್ಮ ಕೈಗೆ ಮುಂದೆ ಇಡುವಾಗ ಎಷ್ಟು ಅಸಕ್ತಿಯನ್ನು ವಹಿಸಿದ್ದೀರಿ ಎಷ್ಟುಶ್ರಮ ತೋರಿಸಿದ್ದೀರಿ ಎನ್ನುವುದಕ್ಕೆ ನಾನು ಒಂದೇ ಒಂದು ಉದಾಹರಣೆ ಹೇಳುವುದಕ್ಕೆ ಇಷ್ಟಪಡುತ್ತೇನೆ.ಈ ವಿಧೇಯಕದಲ್ಲಿರತಕ್ಕಂಥ ಇಂಗ್ಲೀಷ್ ನಕಲು ಮತ್ತು ಕನ್ನಡದ ನಕಲು ಎರಡೂ ನಕಲುಗಳಲ್ಲಿ ಇರುವಂತಹ ವ್ಯತ್ಯಾಸವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. even on material acts, there is a glaring difference between the English version and the Kannada version ಇದು ಮಿನಿಮಮ್ ಕಾಗುಣಿತ ತಪ್ಪಾಗಿದ್ದರೆ ನಾನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ.

10.50 ಎ.ಎಂ

ಮಾನ್ಯ ಅಧ್ಯಕ್ಷರೇ ಸೆಕ್ಷನ್ 310 ಸಚಕ್ಲಾಸ್ (5) ರಲ್ಲಿ "ಜಿಲ್ಲಾಪಂಚಾಯತ್ ಅಧ್ಯಕ್ಷರು, ಜಿಲ್ಲಾ ಯೋಜನ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು ಎಂದಿದೆ ನನ್ನ ಪ್ರಕಾರ ಇದರ ವರ್ಷನ್ Zilla Parishat President will also be the President of the Planning Committee." ಅಂತ ಇರಬೇಕಾಗಿತ್ತು ಆದರೆ ಇದರ ಇಂಗ್ಲೀಷ್ ವರ್ಷನ್ ನೋಡಿದರೆ, ಇದು ಸಂಪೂರ್ಣವಾಗಿ ತದ್ವಿರುದ್ದವಾಗಿದೆ. ಸೆಕ್ಷನ್ 310 ಸಬ್ ಕ್ಲಾಸ್ 5. "The Chairman of the District Planning Comittee shall be chosen in the manner as may be prescribed" ಅಂತ ಇದೆ. ಕನ್ನಡದೊಳಗೆ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಜಿಲ್ಲಾ ಯೋಜನೆಯ ಅಧ್ಯಕ್ಷರಾಗಿರತಕ್ಕದ್ದು. ಎಂದರೆ ಇಂಗ್ಲೀಷ್‌ನಲ್ಲಿ, The Chairman of the District Planning Comittee shall be chosen in the manner as may be prescribed.' ಅಂತ ಇದೆ. ಇದು ಅಕಸ್ಮಿಕವಾದ ತಪ್ಪು ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ಅಥವಾ ಪ್ರಜ್ಞಾಪೂರ್ವಕವಾಗಿ ಆಗಿದೆ ಎಂದು ಕೂಡ ನಾನು ಭಾವಿಸಿಕೊಳ್ಳುವುದಿಲ್ಲ. I should say, it is only due to the negligence on the part of the concerned. ಇಷ್ಟಕ್ಕೆ ಇದು ನಿಲ್ಲಲಿಲ್ಲ.

ಶ್ರೀ ಎಂ.ವೀರಪ್ಪ ಮೊಯ್ಲಿ : ಮಾನ್ಯ ಉಪಾಧ್ಯಕ್ಷರೇ, ಅದು ಇಂಗ್ಲೀಷ್‌ನಲ್ಲಿ ಏನು ಇದೆ ಅದು ಸರಿ. ಯಾಕೆಂದರೆ, ನಮ್ಮ ಸಂವಿಧಾನದ ತಿದ್ದುಪಡಿ ಏನಿದೆ, ಅದು ಇಂಗ್ಲೀಷ್‌ನ ಮಾದರಿಯಲ್ಲಿದ್ದ ಪ್ರಕಾರವೇ ಇದೆ. ನಾವು ಸಂವಿಧಾನಕ್ಕೆ ವಿರುದ್ಧವಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ಕನ್ನಡದ್ದು ನಾವು ಸರಿಮಾಡೋಣ. ನಮಗೆ ಬದಲಾವಣೆ ಮಾಡಬೇಕೆಂದು ಮನಸ್ಸು ಇತ್ತು. ಜಿಲ್ಲಾಪರಿಷತ್ ಅಧ್ಯಕ್ಷರನ್ನೇ ಮಾಡಿಬಿಡೋಣ ಎಂದು ಮನಸ್ಸು ಇತ್ತು.

ಶ್ರೀ ಹೆಚ್ ಏಕಾಂತಯ್ಯ : ಮಾನ್ಯ ಮಂತ್ರಿಗಳು ಇದಕ್ಕೆ ಒಂದು ತಿದ್ದುಪಡಿಯನ್ನು ಕೂಡ ತಂದಿದ್ದರು. ಈಗ ಅದನ್ನು ವಾಪಸ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯ್ಲಿ : ಹೌದು, ಅದನ್ನು ಅವರು ವಾಪಸ್ ತೆಗೆದುಕೊಂಡಿದ್ದಾರೆ ಯಾಕೆಂದರೆ, That is not in accordance with the amendment . ಅದು ವ್ಯತ್ಯಾಸವಾಗುತ್ತದೆ ಎಂದು ಕೈಬಿಟ್ಟಿದ್ದೇವೆ. ಇಲ್ಲವಾದರೆ Our anxiety was to put the Zilla Parishat Chairman as the District Planning Authority. ನಾವು ಅಫೀಶಿಯಲ್ ಅಮೆಂಡ್‌ಮೆಂಟ್ ಕೂಡ ಕಳುಹಿಸಿದ್ದೇವೆ. Again, we re-examined. ಕಾನ್ಸ್ಟಿಟ್ಯೂಶನಲ್ ಅಮೆಂಡ್‌ಮೆಂಟ್‌ನಲ್ಲಿ ಅದು ಈ ತರಹ ಇರುವುದರಿಂದ ಅದಕ್ಕೆ ವ್ಯತಿರಿಕ್ತವಾಗಬಾರದು ಎಂದು ಮಾಡಿದ್ದೇವೆ. We agree with you. Our spirit is also that.

ಶ್ರೀ ವೈ.ಕೆ.ರಾಮಯ್ಯ : ಎಷ್ಟು ಗಂಭೀರವಾಗಿ ಈ ವಿಷಯಗಳನ್ನು